ಜಿಲ್ಲೆಗಳಲ್ಲಿ ಆಟೋ ರಿಕ್ಷಾಗಳಿಗೆ ಮೀಟರ್ ಅಳವಡಿಸಿ ಮತ್ತು ಕಿಲೋಮೀಟರಿಗೆ ದರ ನಿಗದಿಪಡಿಸುವುದು

೭೪೩. ಶ್ರೀಮತಿ ಸುಮಾ ವಸಂತ್(ವಿರಾಜ ಪೇಟೆ) — ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಟೋರಿಕ್ಷಾಗಳಿಗೆ ಮೀಟರ್ ಅಳವಡಿಸಿ, ಅದಕ್ಕೆ ಕಿಲೋಮೀಟರ್‌ಗೆ ನಿಗದಿತ ದರ ಇರಬೇಕೆಂಬ ಸರ್ಕಾರದವರ ನಿರ್ಧಾರವನ್ನು ಎಲ್ಲಾ ಜಿಲ್ಲೆಯಲ್ಲಿಯೂ ಅನುಷ್ಠಾನಕ್ಕೆ ತಂದಿರುವರೆ?

ಆ) ಮೀಟರ್ ಇದ್ದರೆ ಉಪಯೋಗಿಸದೇ ಅಥವಾ ಮೀಟರ್ ಅಳವಡಿಸದೇ ಇರುವ ರಿಕ್ಷಾಗಳ ಚಾಲಕರ ವಿರುದ್ಧ ಸರ್ಕಾರದವರು ಜರುಗಿಸಿದ ಕ್ರಮ ಏನು?

ಇ) ಸದರಿ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಹೌದು, ಕೊಡಗು ಜಿಲ್ಲೆಯನ್ನು ಬಿಟ್ಟು. ಕೊಡಗು ಜಿಲ್ಲೆಯಲ್ಲಿ ಈ ನಿಬಂಧನೆಗೆ ವಿನಾಯಿತಿ ಸರ್ಕಾರ ಕೊಟ್ಟಿದೆ.

ಆ, ತಪ್ಪಿತಸ್ಥರ ವಿರುದ್ಧ ಕೇಸುಗಳನ್ನು ಬುಕ್ ಮಾಡಿ ಕಾನೂನಿನ ಪ್ರಕಾರ ಕ್ರಮ ಜರುಗಿಸಲಾಗುತ್ತಿದೆ.

ಇ) ದಿನಾಂಕ ೧-೪-೮೬ ರಿಂದ ೩೧-೧೦-೮೭ರ ವರೆಗೆ ೧೦೧೩ ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

ಶ್ರೀ ಮತಿ ಸುಮಾ ವಸಂತ್.—ನನ್ನ(ಅ)ಪ್ರಶ್ನೆಗೆ ಮಾನ್ಯ ಮಂತ್ರಿಗಳು 'ಹೌದು' ಎಂದು ಉತ್ತರ ಹೇಳಿದ್ದಾರೆ ಕೆಲವು ಕಡೆಗಳಲ್ಲಿ ದಕ್ಷಿಣ ಕನ್ನಡ ಉತ್ತರ ಕನ್ನಡ ಶಿವಮೊಗ್ಗ ತಿಪಟೂರುಗಳಲ್ಲಿ ಆಟೋರಿಕ್ಷಾಗಳಿಗೆ ಮೀಟರ್‌ಗಳು ಇಲ್ಲ. ಮೀಟರ್‌ಗಳನ್ನು ಹಾಕಿದ್ದರೆ ಲೈಸೆನ್ಸ್ ಕ್ಯಾನ್ಸಲ್ ಮಾಡಲಾಗುತ್ತದೆ ಎನ್ನುವ ಕಾನೂನು ಇದ್ದರೂ ಕೆಲವರು ಮೀಟರ್‌ಗಳನ್ನು ಅಳವಡಿಸಿ ಕೊಂಡಿಲ್ಲ ಇಂತಹ ಪ್ರಕರಣಗಳಲ್ಲಿ ಎಷ್ಟು ಆಟೋರಿಕ್ಷಾಗಳ ಲೈಸೆನ್ಸ್‌ನ್ನು ಕ್ಯಾನ್ಸಲ್ ಮಾಡಿದ್ದೀರಿ?

ಶ್ರೀ ವೀರಣ್ಣ.—ಕೊಡಗು ಜಿಲ್ಲೆಯಲ್ಲಿ ಮಾತ್ರ ಕಡ್ಡಾಯವಾಗಿ ಮೀಟರ್ ಹಾಕಬೇಕೆಂದು ಇಲ್ಲ ಕೊಡಗಿಗೆ ವಿನಾಯಿತಿ ಸಿಕ್ಕಿದೆ. ಶಿವಮೊಗ್ಗ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಆಟೋರಿಕ್ಷಾ ಗಳಿಗೆ ಮೀಟರ್ ಹಾಕಬೇಕೆಂದು ಕಾನೂನು ಇದೆ. ಕಾನೂನನ್ನು ಉಲ್ಲಂಘನೆ ಮಾಡಿದರೆ ಲೈಸೆನ್ಸ್ ರದ್ದುಮಾಡಲಿಕ್ಕೆ ಆರ್ ಟಿ ಒ ಗೆ ಅಧಿಕಾರವಿದೆ ಅದರಂತೆ ಅವರು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ೧೦೧೩ ಜನರಿಗೆ ಫೈನ್ ೧ಲಕ್ಷದ ೨೧ ಸಾವಿರದ ೭೨೧೩ರೂಪಾಯಿಗಳನ್ನು ಫೈನ್ ರೂಪದಲ್ಲಿ ಕಲೆಕ್ಟ್ ಮಾಡಿದ್ದೇವೆ.

ಅಧ್ಯಕ್ಷರು.—ಮಾನ್ಯ ಸಿ ಎಂ ರೇವಣಸಿದ್ದಯ್ಯ ಸದಸ್ಯರು ಬಂದಿಲ್ಲ

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕ. ರಾ. ರ. ಸಾ. ಸಂಸ್ಥೆಯಲ್ಲಿ ನೇಮಕಾತಿ

೭೧೪. **ಶ್ರೀ ಎಂ ಎಂ ಹಿಂದುಸ್ತಾನೇರಿ, (ಹುಬ್ಬಳ್ಳಿ).**—ಮಾನ್ಯ ಸಾರಿಗೆ,ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೪ ರಿಂದ ೧೯೮೫–೮೬ ಮತ್ತು ೧೯೮೬-೮೭ರ ಸಾಲಿನಲ್ಲಿ ಕಿರಿಯ ಸಹಾಯಕ, ಚಾಲಕ ನಿರ್ವಾಹಕ ಕುಶಲ ಕರ್ಮಿ ಮತ್ತು ತಾಂತ್ರಿಕ ಹುದ್ದೆಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕಾತಿಗಳನ್ನು ಮಾಡಲಾಗಿದೆಯೇ.

ಆ) ಹಾಗಿದ್ದಲ್ಲಿ, ಮೇಲ್ಕಂಡ ಸಾಲುಗಳಲ್ಲಿ ವಿಭಾಗವಾರು ಹುದ್ದೆಗಳ ವಿವರಗಳು, ಆಯ್ಕೆ ಮಾಡಲ್ಪಟ್ಟ ಅಭ್ಯರ್ಥಿಗಳ ಒಟ್ಟು ಸಂಖ್ಯೆ. ಮತ್ತು ಅದರಲ್ಲಿ ಮುಸ್ಲೀಂ ಪರಿಶಿಷ್ಟ ಜಾತಿ, ಮತ್ತು ಪರಿಶಿಷ್ಟ ಪಂಗಡದಲ್ಲಿ ನೇಮಕಗೊಂಡಿರುವ ಅಭ್ಯರ್ಥಿಗಳ ಸಂಖ್ಯೆಯನ್ನು ಕೊಡತಕ್ಕದ್ದು

ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಆ) ಹೌದು

ಆ) ವಿವರಗಳನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ANNEXURE 'A'

STATEMENT SHOWING THE RECRUITMENTS MADE IN THE DIVISIONS FOR VARIOUS POSTS DURING 1984-85, 1985-86 & 1986-87.

Sl. No	Division	Post	Total Candidates Selected	S.C.	S.T	B C M 'C' Group
1	2	3	4	5	6	7
1	Mangalore	Driver	264	9	3	59
		Conductor	200	12	2	44
		Helper 'B'	75	11	3	14
		Security Guard	11	2	–	3
		Artisan	17	–	–	7
		Asst. Artisan	11	1	–	5
2	Mysore	Driver	333	20	2	77
		Conductor	278	48	5	52
		Helper 'B'	51	6	1	12
		Security Guard	18	5	–	3
3	Kolar	Driver	100	15	1	20
		Helper 'B'	90	13	3	17
4	Bangalore	Driver	450	35	3	126
		Conductor	200	40	10	36
		Helper 'B'	125	15	4	36
		Security Guard	60	12	3	10
5	B.T.S.	Driver	1165	146	10	232
		Conductor	900	118	20	187
		Security Guard	41	9	3	5
		Artisan	20	1	–	4
		Electrician	3	1	–	–

		Asst. Artisan	51	5	–	6
		Electrician	7	–	–	3
		Welder	2	2	–	–
6	Bijapur	Driver	218	12	–	50
		Conductor	100	40	2	17
		Security Guard	18	4	–	3
7	Bellary	Driver	197	29	4	38
		Conudctor	266	58	8	48
8	Raichur	Driver	332	21	2	78
		Conductor	362	62	4	64
		Artisan	6	1	–	3
		Asst. Artisan	12	4	–	4
9	Gulbarga	Driver	579	55	2	131
		Conductor	738	96	9	156
		Helper 'B'	123	24	6	22
10	Hubli	Drive	340	8	–	82
		Conductor	550	64	5	113
		Security Guard	33	9	–	3
		Helper 'B'	190	38	1	36
11	Belgaum	Driver	145	12	–	31
		Conductor	192	49	3	28
		Security Guard	6	2	–	1
		Sty. Havildar	3	2	–	–
12	Hassan	Driver	22	3	1	–
		Conductor	57	3	2	1
13	N K	Driver	120	8	1	31
		Conductor	186	41	4	32
		Sty. Guard	6	1	–	1
14	R. W. B.	Helper 'B'	315	45	11	54
		Sty. Guard	48	7	2	8
15	R.W.H.	Helper 'B'	179	36	2	32
		Sty. Guard	40	10	–	7

ಜಗಳೂರಂ ತಾಲ್ಲೂಕಿನಿಂದ ಇತರೆ ಸ್ಥಳಗಳಿಗೆ ವಾಹನ ಸೌಲಭ್ಯ

೧೧ಳಳಿ, ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ. (ಜಗಳೂರು) ಮಾನ್ಯ ಸಣ್ಣ ಉಳಿತಾಯ, ಬಂದೀಖಾನೆ, ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಗಳೂರು, ರಂಗಾಪುರ, ತಮ್ಮಡಿಹಳ್ಳಿ, ಗೌಡಗಾನಹಳ್ಳಿ, ಗೌರಿಪುರ, ಕಟ್ಟಸೇನಹಳ್ಳಿ, ಚಿಕ್ಕ ಉಜನಿ ಮೂಲಕ ಕೊಟ್ಟೂರು ಕೂಡ್ಲಿಗಿ ಮತ್ತು ಹೊಸಪೇಟೆಗೆ ಈಗ ಯಾವ ವಾಹನ ಸೌಕರ್ಯವೂ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?